# ಸಮಾಜ ಕಲ್ಯಾಣ ಇಲಾಖೆ
## ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಬೆಂಗಳೂರು.

ಡಾ॥. ಬಿ.ಆರ್ ಅಂಬೇಡ್ಕರ್ ಭವನ, ವಸಂತನಗರ, ಮಿಲ್ಲರ್ಸ್ ರಸ್ತೆ,
ಬೆಂಗಳೂರು– 560052 ದೂ : 080–22207784
ವೆಬ್ ಸೈಟ್ ವಿಳಾಸ: www.sw.kar.nic.in
ಇ–ಮೇಲ್: swdpetc2011@gmail.com

*********

ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಕೇಂದ್ರ ಲೋಕ ಸೇವಾ ಆಯೋಗ / ಕರ್ನಾಟಕ ಲೋಕ ಸೇವಾ ಆಯೋಗ / ಬ್ಯಾಂಕಿಂಗ್ / ಗ್ರೂಪ್ 'ಸಿ' ಮತ್ತು ಎಸ್.ಎಸ್.ಸಿ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ೩ ತಿಂಗಳಿಂದ ೯ ತಿಂಗಳವರೆಗೆ ಪೂರ್ವಭಾವಿ ತರಬೇತಿಗಾಗಿ ದೆಹಲಿ, ಹೈದರಾಬಾದ್ ಹಾಗೂ ಕರ್ನಾಟಕದಲ್ಲಿನ ತರಬೇತಿ ಸಂಸ್ಥೆಗಳಿಗೆ ನಿಯೋಜಿಸಿ ಸದರಿ ತರಬೇತಿಗೆ ತಗಲುವ ಸಂಪೂರ್ಣ ವೆಚ್ಚವನ್ನು ಇಲಾಖಾವತಿಯಿಂದ ಭರಿಸುವುದರ ಜೊತೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ ಶಿಷ್ಯವೇತನವನ್ನು ನೀಡಲಾಗುತ್ತಿದೆ. ವಿವರ ಕೆಳಕಂಡಂತಿದೆ.

| ಕ್ರಸ | ತರಬೇತಿ | ವಿವರ | ತಿಂಗಳು |
|---|---|---|---|
| 1 | ಯು.ಪಿ.ಎಸ್.ಸಿ./ ಕೆ.ಎ.ಎಸ್ / ಬ್ಯಾಂಕಿಂಗ್ ಎಸ್.ಎಸ್.ಸಿ. / ಗ್ರೂಪ್–ಸಿ | ಆನ್–ಲೈನ್ ಮೂಲಕ ಅರ್ಜಿ ಆಹ್ವಾನ | ಮೇ |
| | | ಇಲಾಖೆ ನಡೆಸುವ ಪ್ರವೇಶ ಪರೀಕ್ಷೆ | ಜೂನ್ |
| | | ಆಯ್ಕೆ ಕುರಿತು ಆನ್–ಲೈನ್ ಕೌನ್ಸಿಲಿಂಗ್ | ಜುಲೈ – 1 |
| | | ತರಬೇತಿ ಪ್ರಾರಂಭ | ಜುಲೈ – 15 |
| 2 | ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಸಹಾಯಧನ | ಆನ್–ಲೈನ್ ಮೂಲಕ ಅರ್ಜಿ ಆಹ್ವಾನ | ಏಪ್ರಿಲ್ / ಮೇ ಮತ್ತು ಅಕ್ಟೋಬರ್ / ನವೆಂಬರ್ |
| | | ಆಯ್ಕೆ / ಸಂದರ್ಶನ | ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದ ನಂತರ 15 ದಿನದೊಳಗೆ ಆಯ್ಕೆ ಸಮಿತಿಯ ಮೂಲಕ ಸಂದರ್ಶನ ನಡೆಸಿ ಆಯ್ಕೆ ಮಾಡಲಾಗುವುದು |
| | | ಪ್ರಾರಂಭ | ಅಭ್ಯರ್ಥಿಗಳು ಪ್ರವೇಶ ಪಡೆದ ನಂತರ |
| 3 | ನರ್ಸಿಂಗ್ ಮತ್ತು ಅರೆವೈದ್ಯಕೀಯ ತರಬೇತಿ | ಆನ್–ಲೈನ್ ಮೂಲಕ ಅರ್ಜಿ ಆಹ್ವಾನ | ಜೂನ್ / ಜುಲೈ |
| | | ಆಯ್ಕೆ ಕುರಿತು ಆನ್–ಲೈನ್ ಕೌನ್ಸಿಲಿಂಗ್ | ಆಗಸ್ಟ್ / ಸೆಪ್ಟೆಂಬರ್ |
| | | ತರಬೇತಿ ಪ್ರಾರಂಭ | ಸೆಪ್ಟೆಂಬರ್ |

ಮೊತ್ತ ರೂ. ಗಳಲ್ಲಿ

| **ತರಬೇತಿ** | **ತರಬೇತಿ ಸಂಸ್ಥೆಗಳಿರುವ ಸ್ಥಳ** | **ತರಬೇತಿ ವೆಚ್ಚ** | **ಶಿಷ್ಯವೇತನ** (ಪ್ರತಿ ತಿಂಗಳಿಗೆ) | **ಪ್ರಯಾಣ ಭತ್ಯೆ** |
|---|---|---|---|---|
| **ಯು.ಪಿ.ಎಸ್.ಸಿ** | ದೆಹಲಿ | 1,60,000/- | 10,000/- | 2,000/- |
| | ಹೈದರಾಬಾದ್ | 1,05,000/- | 8,000/- | 1,000/- |
| | ಬೆಂಗಳೂರು | 85,000/- | 6,000/- | |
| **ಕೆ.ಎ.ಎಸ್.** | ಬೆಂಗಳೂರು, ಧಾರವಾಡ, ಬೆಳಗಾವಿ & ಕಲ್ಬುರ್ಗಿ. | 70,000/- | 4,000/- ರಿಂದ 6,000/- | |
| **ಗ್ರೂಪ್ 'ಸಿ'** | ಬೆಂಗಳೂರು, ಧಾರವಾಡ, ಬೆಳಗಾವಿ, ದಾವಣಗೆರೆ ಕಲ್ಬುರ್ಗಿ. | 25,000/- | 4,000/- ರಿಂದ 6,000/- | |
| **ಬ್ಯಾಂಕಿಂಗ್** | ಬೆಂಗಳೂರು, ಧಾರವಾಡ, ಬೆಳಗಾವಿ ಕಲ್ಬುರ್ಗಿ. | 15,000/- | 4,000/- ರಿಂದ 6,000/- | |
| **ಎಸ್.ಎಸ್.ಸಿ.** | ಬೆಂಗಳೂರು, ಧಾರವಾಡ, ಬೆಳಗಾವಿ | ಗ್ರೂಪ್ 'ಬಿ' - 45,000/- ಗ್ರೂಪ್ 'ಸಿ' - 35,000/- | 4,000/- ರಿಂದ 6,000/- | |

<u>ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಅಭ್ಯರ್ಥಿಗಳು ಹೊಂದಿರಬೇಕಾಗಿರುವ ಅರ್ಹತೆಗಳು</u>

- ಮೇ ಮಾಹೆಯಲ್ಲಿ ಆನ್-ಲೈನ್ ಮೂಲಕ ಅರ್ಜಿ ಆಹ್ವಾನ.
- ಪದವಿಯಲ್ಲಿ ಉತ್ತೀರ್ಣರಾಗಿದ್ದು, ವಯಸ್ಸು 35 ಮೀರಿರಬಾರದು.
- ಕುಟುಂಬದ ವಾರ್ಷಿಕ ಆದಾಯ ರೂ. 6.00 ಲಕ್ಷಗಳು ಮೀರಿರಬಾರದು.
- ತರಬೇತಿ ಅವಧಿ 3 ರಿಂದ 9 ತಿಂಗಳುಗಳು.
- ಮಾಸಿಕ ಶಿಷ್ಯವೇತನ : ದೆಹಲಿ - ರೂ 10,000, ಹೈದರಬಾದ್ -ರೂ 8,000, ಬೆಂಗಳೂರು-6000, ಹಾಗೂ ದಾರವಾಡ, ಬೆಳಗಾವಿ, ಕಲ್ಬುರ್ಗಿ, ದಾವಣಗೆರೆ- ರೂ 5,000 ಅಭ್ಯರ್ಥಿಗಳ ಬ್ಯಾಂಕ್ ಖಾತೆಗೆ ನೀಡಲಾಗುವುದು.
- ಶಿಷ್ಯವೇತನ ಪ್ರತಿ ತಿಂಗಳು 5ನೇ ತಾರೀಕಿನೊಳಗೆ ಅಭ್ಯರ್ಥಿಗಳ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್, ಮೂಲಕ ನೀಡಲಾಗುವುದು.

## ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಸಹಾಯಧನ ಪಡೆಯಲು ಅಭ್ಯರ್ಥಿಗಳು ಹೊಂದಿರಬೇಕಾಗಿರುವ ಅರ್ಹತೆಗಳು

- ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ, ಪಿ.ಹೆಚ್.ಡಿ. ಅಧ್ಯಯನ ಹಾಗೂ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಧನಸಹಾಯ.
- ಅರ್ಹತಾ ಪದವಿಯಲ್ಲಿ ಶೇ. 60 ಅಂಕಗಳನ್ನು ಪಡೆದಿರಬೇಕು
- ಅಭ್ಯರ್ಥಿಯ ವಯಸ್ಸು 35 ವರ್ಷ ಮೀರಿರಬಾರದು.
- ವಾರ್ಷಿಕ ಆದಾಯ ರೂ. 6.00 ಲಕ್ಷಕ್ಕಿಂತ ಕಡಿಮೆ ಇರುವ ಅಭ್ಯರ್ಥಿಗಳಿಗೆ 100% ರಷ್ಟು ಮತ್ತು ರೂ. 6.00 ಲಕ್ಷದಿಂದ ರೂ. 10.00 ಲಕ್ಷ ಆದಾಯ ಇರುವ ಅಭ್ಯರ್ಥಿಗಳಿಗೆ 33% ರಷ್ಟು ಧನಸಹಾಯ ನೀಡಲಾಗುವುದು.
- ಅಭ್ಯರ್ಥಿಯು ಕಡ್ಡಾಯವಾಗಿ ವಿಶ್ವ ದರ್ಜೆಯ 1 ರಿಂದ 200 ರ ವರೆಗಿನ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗಕ್ಕಾಗಿ ಪ್ರವೇಶ ಪಡೆದಿರತಕ್ಕದ್ದು. (Below 200 rank in QS world ranking).
- ವಿದ್ಯಾರ್ಥಿ ವೇತನ :- ಕೋರ್ಸು ಫೀ, ವಾರ್ಷಿಕ ನಿರ್ವಹಣಾ ಭತ್ಯೆ ಗರಿಷ್ಠ ರೂ. 6.00 ಲಕ್ಷಗಳು. ಪುಸ್ತಕಗಳ ಖರೀದಿಗಾಗಿ ಸಂಪೂರ್ಣ ವ್ಯಾಸಾಂಗದ ಅವಧಿಗೆ ರೂ. 75,000/- ವೀಸಾಕ್ಕೆ ತಗಲುವ ವಾಸ್ತವಿಕ ವೆಚ್ಚ & ಒಂದು ಬಾರಿಗೆ ಎಕಾನಮಿ ಕ್ಲಾಸ್‌ನ ವಿಮಾನ ಪ್ರಯಾಣದ ವೆಚ್ಚವನ್ನು ನೀಡಲಾಗುತ್ತದೆ.

## ನರ್ಸಿಂಗ್ ಮತ್ತು ಅರೆವೈದ್ಯಕೀಯ ತರಬೇತಿ ಪಡೆಯಲು ಅಭ್ಯರ್ಥಿಗಳು ಹೊಂದಿರಬೇಕಾಗಿರುವ ಅರ್ಹತೆಗಳು

- ಜೂನ್ / ಜುಲೈ ಮಾಹೆಯಲ್ಲಿ ಆನ್-ಲೈನ್ ಮೂಲಕ ಅರ್ಜಿ ಆಹ್ವಾನ.
- 2 ವರ್ಷಗಳ ಎಂ.ಎಸ್.ಸಿ ಮತ್ತು ಪಿ.ಬಿ.ಬಿ.ಎಸ್.ಸಿ ನರ್ಸಿಂಗ್, 3 ವರ್ಷಗಳ ಜಿ.ಎನ್.ಎಂ ಮತ್ತು 4 ವರ್ಷಗಳ ಬಿ.ಎಸ್.ಸಿ ನರ್ಸಿಂಗ್ ಹಾಗೂ 2 ರಿಂದ 3 ವರ್ಷಗಳ ವಿವಿಧ ಅರೆವೈದ್ಯಕೀಯ ಕೋರ್ಸ್‌ಗಳಿಗೆ ಅಭ್ಯರ್ಥಿಗಳನ್ನು ನಿಯೋಜಿಸಲಾಗುವುದು.
- ಅಭ್ಯರ್ಥಿಯ ವಯಸ್ಸು 35 ವರ್ಷ ಮೀರಿರಬಾರದು.
- ಕುಟುಂಬದ ವಾರ್ಷಿಕ ಆದಾಯ ರೂ. 2.50 ಲಕ್ಷಗಳು ಮೀರಿರಬಾರದು.
- ಅಭ್ಯರ್ಥಿಗಳ ಶೈಕ್ಷಣಿಕ ಅರ್ಹತೆಯು ಪ್ರತಿ ವರ್ಷ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಮತ್ತು ರಾಜೀವ್‌ಗಾಂಧಿ ಆರೋಗ್ಯ ವಿಶ್ವ ವಿದ್ಯಾಲಯ ರವರು ಹೊರಡಿಸುವ ಅಧಿಸೂಚನೆಗಳಿಗೆ ಒಳಪಟ್ಟಿರುತ್ತದೆ.
- ಕೋರ್ಸ್ ಶುಲ್ಕಗಳನ್ನು ಇಲಾಖಾವತಿಯಿಂದ ಭರಿಸುವುದರ ಜೊತೆಗೆ ಅಭ್ಯರ್ಥಿಗಳಿಗೆ ಮಾಸಿಕ ಶಿಷ್ಯವೇತನವನ್ನು ನೀಡಲಾಗುತ್ತದೆ.

**********